**ಪಿ.ಡಬ್ಲ್ಯು-02**

**ಸಾಕ್ಷಿಯನ್ನು ದಿನಾಂಕಃ 09.01.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಪ್ರತಿವಾದಿಗಳ ಪರ ಶ್ರೀ ಬಿ.ವೈ, ವಕೀಲರಿಂದಃ**

ನಾನು ಸಲ್ಲಿಸಿರುವ ಪ್ರಮಾಣಪತ್ರದಲ್ಲಿರುವ ವಿಚಾರಗಳ ಬಗ್ಗೆ ಗೊತ್ತಿರುತ್ತವೆ. ವಾದಿಗಳು ಮತ್ತು ನಾನು ಒಂದೇ ಗ್ರಾಮದವರಾಗಿರುತ್ತೇವೆ ಎಂದರೆ ಸರಿ. ತಗಡೂರು ಗ್ರಾಮದಲ್ಲಿ ನನಗೆ ವಾಸದ ಮನೆಯಿರುವುದಿಲ್ಲ. ಪ್ರತಿವಾದಿಗಳು ನನಗೆ ಪರಿಚಯವಿರುವುದಿಲ್ಲ. ಹೆಮ್ಮರಗಾಲ ಗ್ರಾಮದಲ್ಲಿ ನನಗೆ ಸೇರಿದ ಯಾವುದೇ ಆಸ್ತಿಯಿರುವುದಿಲ್ಲ ಎಂದರೆ ಸರಿ. 1 ನೇ ವಾದಿ ಕಾಳೇಗೌಡ ಎಂಬುವವರನ್ನು ಯಾವ ಇಸವಿಯಲ್ಲಿ ಮದುವೆಯಾಗಿರುತ್ತಾರೆಂದು ನನಗೆ ಗೊತ್ತಿಲ್ಲ. ಅವರ ಮದುವೆ ಎಲ್ಲಿ ಮತ್ತು ಯಾವ ಸ್ಥಳದಲ್ಲಿ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಮದುವೆ ಮಾಡಿದ ಪುರೋಹಿತರು ಯಾರು ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಸ್ವತಃ ಮುಂದುವರಿದು ಪಾರ್ವತಿ ಬೆಟ್ಟದಲ್ಲಿ ಮದುವೆಯಾಗಿರುತ್ತದೆಂದು ನುಡಿಯುತ್ತಾರೆ. ಪಾರ್ವತಿ ಬೆಟ್ಟದಲ್ಲಿ ಮದುವೆಯಾಗಿರುತ್ತದೆಂಬ ವಿಚಾರವನ್ನು ಪ್ರಮಾಣಪತ್ರದಲ್ಲಿ ಹೇಳಿ ಬರೆಯಿಸಿಲ್ಲ. 1 ನೇ ವಾದಿಯ ಮದುವೆ ಸಮಯದಲ್ಲಿ ಸುಮಾರು 20 ಜನರು ಸೇರಿದ್ದರು. 1 ನೇ ವಾದಿ ಮತ್ತು ಕಾಳೇಗೌಡರವರ ನಡುವೆ ಯಾವುದೇ ರೀತಿ ಮದುವೆಯಾಗಿಲ್ಲ ಎಂದರೆ ಸರಿಯಲ್ಲ. 2 ನೇ ವಾದಿ ಕಾಳೇಗೌಡರವರ ಮಗನಾಗಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ವಾದಿ ಮತ್ತು ಕಾಳೇಗೌಡರವರು ಮದುವೆಯಾಗಿರುವ ಬಗ್ಗೆ ನಾನು ದಾಖಲೆ ನೋಡಿಲ್ಲ. ನಮ್ಮ ಗ್ರಾಮದಲ್ಲಿ ಕಾಳೇಗೌಡ ಎಂಬ ಹೆಸರಿನವರು ಸುಮಾರು ಜನರಿರುತ್ತಾರೆ ಎಂದರೆ ಸರಿ. ವಾದಿಗಳು ಮತ್ತು ಕಾಳೇಗೌಡರಿಗೂ ಯಾವುದೇ ಸಂಬಂಧವಿಲ್ಲದಿದ್ದರೂ ವಾದಿಗಳಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,**

**ನಂಜನಗೂಡು.**